# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 788
ಸದಸ್ಯರ ಹೆಸರು : ಡಾ|| ಕೆ. ಗೋವಿಂದರಾಜ್
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 17.09.2021

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಕರ್ನಾಟಕ ಸರ್ಕಾರವು ಟಾಟಾ ಮಾರ್ಕೋಪೋ ಲೋ ಬಸ್ಸುಗಳನ್ನು ಯಾವ ಅವಧಿಯಲ್ಲಿ ಖರೀದಿಸಲಾಗಿತ್ತು, ಖರೀದಿಸಿದ ಬಸ್ ಗಳ ಸಂಖ್ಯೆ ಎಷ್ಟು; ಪ್ರತಿ ಬಸ್ ಗೆ ಪಾವತಿಸಿದ ಹಣವೆಷ್ಟು; (ಒಟ್ಟು ವಿನಿಯೋಗ ವೆಚ್ಚದ ಕುರಿತಾಗಿ ಸಂಪೂರ್ಣ ಮಾಹಿತಿ ಒದಗಿಸುವುದು)</td><td>ಟಾಟಾ ಮಾರ್ಕೋಪೋಲೋ ಬಸ್ಸುಗಳನ್ನು 2009-10ನೇ ಸಾಲಿನಲ್ಲಿ ಖರೀದಿಸಲಾಗಿತ್ತು, ವಿವರ ಈ ಕೆಳಕಂಡಂತಿದೆ:<br><table>
<tr><th>ಸಂಸ್ಥೆ</th><th>ಖರೀದಿಸಿದ ಬಸ್ಸುಗಳ ಸಂಖ್ಯೆ</th><th>ಪ್ರತಿ ಬಸ್‌ನ ದರ (ರೂ.)</th><th>ಒಟ್ಟು ವೆಚ್ಚ (ರೂ.)</th></tr>
<tr><td>ಕ.ರಾ.ರ.ಸಾ.ನಿಗಮ</td><td>41</td><td>26,15,406</td><td>10,72,31646</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>98</td><td>31,00,507</td><td>30,38,49,686</td></tr>
</table></td></tr>
<tr><td>ಆ.</td><td>ಖರೀದಿಸಲಾದ ಟಾಟಾ</td><td>ಟಾಟಾ (ಮಾರ್ಕೋಪೋಲೋ ಕವಚ) ಬಸ್ಸುಗಳ ಆಚರಣಾ ಸಮಯದಲ್ಲಿ ತಾಂತ್ರಿಕ ದೋಷಗಳು</td></tr>
</table>

| | | |
|---|---|---|
| | ಮಾರ್ಕೋಪೋಲೋ ಬಸ್ಸುಗಳು ತಾಂತ್ರಿಕ ದೋಷ ಹೊಂದಿದ್ದವು ಎಂಬುದು ನಿಜವೇ; ಹಾಗಿದ್ದಲ್ಲಿ, ಸದರಿ ಖರೀದಿಯಲ್ಲಿ ಅನುಸರಿಸಲಾದ ಮಾನದಂಡ ಏನು; ಈ ಖರೀದಿಯಿಂದ ಸರ್ಕಾರಕ್ಕೆ ಆದ ಒಟ್ಟು ನಷ್ಟ ಎಷ್ಟು; (ವಿವರ ಒದಗಿಸುವುದು) | ಕಂಡುಬಂದಿರುತ್ತದೆ.<br>ಸದರಿ ಬಸ್ಸುಗಳನ್ನು ಕೇಂದ್ರ ಸರ್ಕಾರವು ನೀಡಿದ ಮಂಜೂರಾತಿಯಂತೆ ತಾಂತ್ರಿಕ ನಿರ್ದಿಷ್ಟತೆಗಳನ್ನು ಅಂತಿಮಗೊಳಿಸಿ ಕೆ.ಟಿ.ಪಿ.ಪಿ ಕಾಯ್ದೆ ಅನ್ವಯ ಟೆಂಡರ್ ಮುಖಾಂತರ ಖರೀದಿಸಲಾಗಿರುತ್ತದೆ.<br>ಬೆಂ.ಮ.ಸಾ.ಸಂಸ್ಥೆಗೆ ಸದರಿ ಬಸ್ಸುಗಳ ಐದು ವರ್ಷ ಆಚರಣೆಯಲ್ಲಿ ಒಟ್ಟು ಸಂಚಿತ ನಷ್ಟವು ರೂ.30.47 ಕೋಟಿ ಆಗಿರುತ್ತದೆ ಹಾಗೂ ಕ.ರಾ.ರ.ಸಾ.ನಿಗಮಕ್ಕೆ ರೂ.14.10ಕೋಟಿಗಳ ನಷ್ಟ ಉಂಟಾಗಿರುತ್ತದೆ.<br>ಮಾರ್ಕೋಪೋಲೋ ವಾಹನಗಳನ್ನು ಹಲವಾರು ತಾಂತ್ರಿಕ ದೋಷಗಳಿದ್ದು, ಮೆ|\| ಟಾಟಾ ಮೋಟಾರ್ ಇವರ ವಿರುದ್ಧ ನಷ್ಟದ ಪರಿಹಾರ ಮೊತ್ತಕ್ಕೆ ಮಾನ್ಯ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ. |
| ಇ. | ಈ ಖರೀದಿಯಲ್ಲಿ ಆಗಿರುವ ಹಗರಣ ಕುರಿತಾಗಿ ಸದನ ಸಮಿತಿ ರಚನೆಯಾಗಿದೆ ಯೇ; ಹೌದಾದಲ್ಲಿ, ವರದಿ ಸಲ್ಲಿಸಿದ ನಂತರ, ಪ್ರಕರಣದ ತನಿಖೆಯನ್ನು ಸಿ.ಐ.ಡಿಗೆ ವಹಿಸಲಾಯಿತೇ; ಪ್ರಕರಣಕ್ಕೆ | ಸದನ ಸಮಿತಿ ರಚನೆಯಾಗಿರುವುದಿಲ್ಲ.<br>ಆದರೆ, ಸಚಿವ ಸಂಪುಟವು ಟಾಟಾ ಮಾರ್ಕೋಪೋಲೋ ಬಸ್ಸುಗಳನ್ನು ಅವಧಿಗೆ ಮುನ್ನ ನಿಷ್ಕ್ರಿಯಗೊಳಿಸಲು ಹಾಗೂ ಸಂಸ್ಥೆಗಳ ನಷ್ಟಕ್ಕೆ ಕಾರಣರಾದವರ ವಿರುದ್ಧ ತನಿಖೆ ನಡೆಸಿ, ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತೀರ್ಮಾನಿಸಿರುವಂತೆ, ತನಿಖೆ ನಡೆಸಿ ವರದಿ ಸಲ್ಲಿಸಲು ವಿಚಾರಣಾಧಿಕಾರಿಯನ್ನು ನೇಮಿಸಲಾಗಿತ್ತು.<br>ವಿಚಾರಣಾಧಿಕಾರಿಯವರು ಸಲ್ಲಿಸಿರುವ ವರದಿಯಲ್ಲಿ ಗುರುತಿಸಿರುವ ಲೋಪಗಳಿಗೆ ಸಂಬಂಧಿಸಿದಂತೆ ಕಾರಣರಾದವರನ್ನು ಗುರುತಿಸಿ, ಸ್ಪಷ್ಟ ಅಭಿಪ್ರಾಯದೊಂದಿಗೆ ವಿವರವಾದ ವರದಿ ಸಲ್ಲಿಸಲು ಹಿರಿಯ ಅಧಿಕಾರಿಗಳ ತಂಡವನ್ನು ರಚಿಸಲಾಗಿದೆ. ಸದರಿ ತಂಡವು ಸಭೆಗಳನ್ನು ಜರುಗಿಸಿ, ಲಭ್ಯವಿರುವ |

| | | |
|---|---|---|
| | ಸಂಬಂಧಿಸಿದಂತೆ ಪ್ರಸಕ್ತ ಸ್ಥಿತಿಗತಿ ಬಗ್ಗೆ ಸರ್ಕಾರ ಕೈಗೊಂಡ ಅಂತಿಮ ಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿ ಒದಗಿಸುವುದು; | ದಾಖಲೆಗಳನ್ನು ಪರಿಶೀಲಿಸಿ, ಸಲ್ಲಿಸಿರುವ ವರದಿಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |

ಸಂಖ್ಯೆ: ಟಿಡಿ 204 ಟಿಸಿಕ್ಯೂ 2021

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು